ಸದರಿ ಯೋಜನಾ ವರದಿಯನ್ನು ಖಾದಿ ಆಯೋಗಕ್ಕೆ ಶಿಫಾರಸ್ಸು ಮಾಡಲಾಗಿದೆ. ಈ ಯೋಜನೆಯು ಅನುಷ್ಠಾನದಲ್ಲಿ ದೇವರಹಿಪ್ಪರಗಿ ಗ್ರಾಮದ ಸುತ್ತಮುತ್ತಲ ಗ್ರಾಮದಲ್ಲಿ ಸುಮಾರು 300 ಕುಟುಂಬಗಳ 170 ಕುಶಲಕರ್ಮಿಗಳ ಉದ್ಯೋಗವಕಾಶವನ್ನು ಕಲ್ಪಿಸಿದಂತಾಗುತ್ತದೆ. ಹಾಗೂ ಅತ್ಯಾಧುನಿಕ ತಂತ್ರಜ್ಞಾನದದಡಿಯಲ್ಲಿ ವಸ್ತುಗಳನ್ನು ಉತ್ಪಾದನೆ ಮಾಡಲು ಸಹ ಪ್ರೋತ್ಸಾಹ ನೀಡಿದಂತಾಗುತ್ತದೆ.

ಇ) ಉದ್ದಿಮೆದಾರರು ಮಡಿಕೆ ಸುಡಲು ಶೆಡ್ ನಿರ್ಮಿಸಲು (ಸುಡುವ ಮನೆ) ಹಣಕಾಸು ವ್ಯವಸ್ಥೆ ಕಲ್ಪಿಸಲಾಗಿರುತ್ತದೆ.

ಈ) ಉದ್ದಿಮೆದಾರರು ಮಣ್ಣಿನ ಮಡಿಕೆಗಳನ್ನು ಸುಡಲು ಬೇಕಾದ ಕಟ್ಟಿಗೆಯನ್ನು ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸಬಹುದಾಗಿರುತ್ತದೆ. ಇದನ್ನು ಖರೀದಿಸುವ ಸಲುವಾಗಿ ದುಡಿಯುವ ಬಂಡವಾಳ ರೂಪದಲ್ಲಿ ಹಣಕಾಸಿನ ನೆರವನ್ನು ಒದಗಿಸಲಾಗುತ್ತಿದೆ.

ಉ) ಮೇಲಿನಂತೆ.

ಕರಾವಳಿ ಜಿಲ್ಲೆಯ ಎಡಿಬಿ ಯೋಜನೆ

266 (251) ಶ್ರೀ ಗೋಪಾಲ ಬಂಡಾರಿ .ಹೆಚ್.(ಕಾರ್ಕಳ):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎ.ಡಿ.ಬಿ ಯೋಜನೆಯಲ್ಲಿ ಕರಾವಳಿ ಜಿಲ್ಲೆಯ ಕಾರ್ಕಳ, ಮೂಡಬಿದ್ರೆ, ಬಂಟ್ವಾಳ, ಮೂಲ್ಕೆ ಪುರಸಭೆಗಳನ್ನು ಸೇರಿಸದಿರಲು ಕಾರಣವೇನು?

ಆ) ಈ ಪುರಸಭೆಗಳನ್ನು ಹೆಚ್ಚುವರಿಯಾಗಿ ಸೇರಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆಯೇ(ವಿವರ ಒದಗಿಸುವುದು)

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) ಎ.ಡಿ.ಬಿ. ಯೋಜನೆಯಲ್ಲಿ ಈ ಕೆಳಕಂಡ ಅಂಶಗಳ ಆಧಾರದ ಮೇಲೆ ವಿವರವಾಗಿ ಅಧ್ಯಯನದ ನಂತರ ಕರ್ನಾಟಕ ನಗರಾಭಿವೃದ್ಧಿ ಮತ್ತು ಕರಾವಳಿ ಪರಿಸರ ನಿರ್ವಹಣಾ ಯೋಜನೆಯಡಿ ಪಟ್ಟಣಗಳನ್ನು ಆರಿಸಲಾಯಿತು.

1) ನಗರ : ಪಟ್ಟಣದ ಜನ ಸಂಖ್ಯೆ

2) ಈಗಿರುವ ಮೂಲ ಭೂತ ಸೌಲಭ್ಯಗಳು

3) ನಗರ ಸಭೆ : ಪುರಸಭೆಯಲ್ಲಿ ಅಭಿವೃದ್ಧಿ ನಕಾಶೆಯ ಲಭ್ಯತೆ.

4) ನಗರ ಸಭೆ : ಪುರಸಭೆಯ ಸಾಲವನ್ನು ಹಿಂತಿರುಗಿಸುವ ಬಗ್ಗೆ (ಆರ್ಥಿಕ ಸ್ಥಿತಿ) ಮೇಲಿನ ಅಂಶಗಳ ಆಧಾರದ ಮೇಲೆ ಕೇವಲ 10 ಪಟ್ಟಣಗಳನ್ನು ಅಂತಿಮವಾಗಿ ತೆಗೆದುಕೊಳ್ಳಲಾಗಿದೆ.

ಆ) ಈ ಯೋಜನೆಯಡಿಯಲ್ಲಿ ಆರ್ಥಿಕ ಉಳಿತಾಯದ ಮೇರೆಗೆ, ಪುರಸಭೆಗಳನ್ನು ಹೆಚ್ಚುವರಿಯಾಗಿ ಸೇರಿಸುವ ವಿಚಾರವನ್ನು ಯೋಜನೆಯ 3ನೇ ವರ್ಷದ ಅನುಷ್ಠಾನದ ನಂತರವೇ ಪರಿಗಣಿಸಬಹುದು.